ಬುಧವಾರ, 5 ಏಪ್ರಿಲ್ 2017 | ಪುಟಗಳು: 16+4+4(Udp6) | ಬೆಲೆ: ₹ 5.00
www.vijaykarnataka.com
ಸಂಪುಟ: 16 | ಸಂಚಿಕೆ: 249
VK
ವಿಜಯ ಕರ್ನಾಟಕ
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ | ಚಿತ್ರ

ಶ್ರೀರಾಮನವಮಿ ಶುಭಾಶಯಗಳು



ಮಹರ್ಷಿ ವಾಲ್ಮೀಕಿ ವಿರುದ್ಧ ಅವಹೇಳನಕಾರಿ ಹೇಳಿಕೆ: ನಟಿ ರಾಖಿ ಸಾವಂತ್ ಬಂಧನ ವದಂತಿ

ಸಿರಿಯಾದ ಬಂಡುಕೋರರ ನೆಲೆ ಮೇಲೆ ವಿಷಾನಿಲ ದಾಳಿ ನಡೆದಿದ್ದು, 11 ಮಕ್ಕಳು ಸೇರಿದಂತೆ 58 ಮಂದಿ ಮೃತಪಟ್ಟಿದ್ದಾರೆ

ಯುಪಿ ಸಿಎಂ ಆದಿತ್ಯನಾಥ್ ಮೊದಲ ಸಂಪುಟ ಸಭೆಯಲ್ಲಿ ರೈತರ ಸಾಲ ಮನ್ನಾಕ್ಕೆ ಅಸ್ತು

# ಉದ್ಯಮ ಕ್ಷೇತ್ರದ ಬದಲಾವಣೆ ಗಮನಿಸಿದರೆ ಯಶಸ್ಸು

## ಅಡ್ಯಾರಿನ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಶನಿವಾರ ಶೇಪ್ ಇಟ್ ಪುಸ್ತಕ ಬಿಡುಗಡೆಗೊಳಿಸಿ ಎಂ.ವಿ.ಸುಬ್ರಮಣಿಯನ್

**ವಿಕ ಸುದ್ದಿಲೋಕ** ಮಂಗಳೂರು

ಉದ್ಯಮ ಕ್ಷೇತ್ರದಲ್ಲಿ ಪ್ರತಿ ದಿನವೂ ಬದಲಾವಣೆ ಆಗುತ್ತಿದ್ದು, ಅದಕ್ಕೆ ಅನುಗುಣವಾಗಿ ತಂತ್ರಜ್ಞಾನ ಬಳಕೆ ಮಾಡಿಕೊಳ್ಳುವತ್ತ ಗಮನ ಕೇಂದ್ರೀಕರಿಸಬೇಕು. ಎಂಜಿನಿಯರಿಂಗ್ ವಿದ್ಯಾರ್ಥಿಗಳು ಉದ್ಯಮ ಕ್ಷೇತ್ರದಲ್ಲಿ ಆಗುವಂತಹಹ ದಿನ ನಿತ್ಯದ ಬದಲಾವಣೆಗಳನ್ನು ಸೂಕ್ಷ್ಮವಾಗಿ ಗಮನಿಸುವ ಗುಣಗಳನ್ನು ಬೆಳಸಿಕೊಂಡಾಗ ಮಾತ್ರ ಯಶಸ್ಸು ಸಾಧ್ಯ ಎಂದು ಫ್ಯೂಚರ್ ಫೋಕಸ್ ಇನ್ಫೋಟೆಕ್ ಪ್ರೈವೇಟ್ ಲಿಮಿಟೆಡ್‌ನ ಸಹ ಸಂಸ್ಥಾಪಕ ಹಾಗೂ ವ್ಯವಸ್ಥಾಪಕ ನಿರ್ದೇಶಕ ಎಂ.ವಿ.ಸುಬ್ರಮಣಿಯನ್ ಹೇಳಿದರು.




ಅಡ್ಯಾರಿನ ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್ ಮೆಂಟ್ ಕಾಲೇಜಿನಲ್ಲಿ ಶನಿವಾರ ಶೇಪ್ ಇಟ್ ಪುಸ್ತಕ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಶೇಪ್ ಇಟ್ ಪುಸ್ತಕದಲ್ಲಿ 50 ವಿದ್ಯಾರ್ಥಿಗಳು ಹಂಚಿಕೊಂಡಿರುವ ಕಥೆಗಳು ಹಾಗೂ ಅನುಭವಗಳು ಇದ್ದು, ಇವುಗಳು ಎಳೆಯ ಹಾಗೂ ಉದಯೋನ್ಮುಖ ಎಂಜಿನಿಯರ್‌ಗಳಿಗೆ ಮಾದರಿ ಪುಸ್ತಕವಾಗಲಿದೆ. ನಾವು ಯಾವಾಗಲೂ ಯಶಸ್ಸು ಹಿಂಬಾಲಿಸಿಕೊಂಡು ಹೋಗುವ ಗುಣ ಬೆಳೆಸಿಕೊಳ್ಳಬಾರದು. ಅದರ ಬದಲಾಗಿ ಸ್ಪರ್ಧಾತ್ಮಕ ಮನೋಭಾವದಿಂದ ಉದ್ಯಮ ಗುಣ ಮೈಗೂಡಿಸಿಕೊಳ್ಳುವ ಮೂಲಕ ಯಶಸ್ಸು ಸಾಧಿಸಿಕೊಳ್ಳಬೇಕು ಎಂದು ಅವರು ಹೇಳಿದರು.

ಶೇಪ್ ಇಟ್ ಪುಸ್ತಕದ ಕುರಿತು ಡಾ. ಸುಬ್ರಮಣಿಯನ್ ಆರ್. ಹಾಗೂ ವೈಜಯಂತಿ ಎಸ್. ಅವರು ತಮ್ಮ ಅನುಭವಗಳನ್ನು ಹಂಚಿಕೊಂಡರು. ಭಂಡಾರಿ ಫೌಂಡೇಶನ್ ಅಧ್ಯಕ್ಷ ಮಂಜುನಾಥ ಭಂಡಾರಿ ಅಧ್ಯಕ್ಷತೆ ವಹಿಸಿದ್ದರು. ವೋಕೆ ಎಂಜಿನಿಯರಿಂಗ್ ಔಟ್‌ಸೋರಸಿಂಗ್ ಪ್ರೈವೇಟ್ ಲಿಮಿಟೆಡ್‌ನ ನಿರ್ದೇಶಕ ಸುಂದರ್ ಮೂರ್ತಿ ಮಾತನಾಡಿದರು. ಪುಸ್ತಕವು ಉತ್ತಮವಾಗಿ ಮೂಡಿ ಬರಲು ಸಕಾಲದಲ್ಲಿ ಕಥೆಗಳನ್ನು ನೀಡಿದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ನೀಡಿ ಸನ್ಮಾನಿಸಲಾಯಿತು.

ಕಾಲೇಜಿನ ವೈಸ್ ಪ್ರಿನ್ಸಿಪಾಲ್ ಡಾ.ಬಾಲಕೃಷ್ಣ ವಂದಿಸಿದರು.